ಒ ಎಸ್ 162/2021 ಪಿ.ಡಬ್ಲ್ಯೂ 1

ಇಂದು ದಿಃ 16.09.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1 ರಿಂದ 10 ಮತ್ತು 18ನೇ ಪ್ರತಿವಾದಿ ಪರ ಶ್ರೀ ಎಸ್ ಯು ವಕೀಲರಿಂದಃ

ನಾನು ವಕೀಲ ವೃತ್ತಿ ಮಾಡುತ್ತಿದ್ದೇನೆ. ದಾವಾ ಆಸ್ತಿಗಳು ನನ್ನ ಅಜ್ಜಿಯ ತಂದೆಯ ಆಸ್ತಿಗಳು ಅಂದರೆ ನನ್ನ ತಂದೆಯ ತಾತನ ಆಸ್ತಿಗಳು. ನನ್ನ ತಂದೆಗೆ ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಯಲ್ಲ. ನನ್ನ ತಂದೆಯ ತಾಯಿ ಮೃತಪಟ್ಟು 19 ವರ್ಷವಾಯಿತು. ನನ್ನ ತಂದೆ ಮೃತರಾಗಿ 7 ವರ್ಷ ಆಯಿತು. ನನ್ನ ತಂದೆ ಮತ್ತು ಅವರ ತಾಯಿ ಎಲ್ಲರೂ ತಗಡೂರು ಗ್ರಾಮದಲ್ಲಿ ವಾಸ ಇದ್ದೆವು. ದಾವಾ ಆಸ್ತಿಗಳು ಎಲ್ಲಾ ತಗಡೂರು ಗ್ರಾಮದಲ್ಲಿವೆ. ದಾವಾ ಆಸ್ತಿಗಳು ತಗಡೂರು ಗ್ರಾಮದಲ್ಲಿರುವ ಕಾರಣ ಮತ್ತು ನಾವು ತಗಡೂರು ಗ್ರಾಮದಲ್ಲಿರುವ ಕಾರಣ ದಾವಾ ಆಸ್ತಿಗಳು ವ್ಯವಹಾರ ಆದರೆ ಅದು ನಮ್ಮ ಗಮನಕ್ಕೆ ಬರುತ್ತಿತ್ತು. ದಾವಾ ಆಸ್ತಿಗಳು 1ನೇ ಪ್ರತಿವಾದಿಗೆ 1992-93ರಲ್ಲಿ ಖಾತೆ ಆಗಿದೆ. ಖಾತೆಯಾದಾಗ ನನ್ನ ತಂದೆ ಮತ್ತು ನನ್ನ ತಂದೆಯ ತಾಯಿ ಬದುಕಿದ್ದರು. ಅವರು ಆ ಸಮಯದಲ್ಲಿ ತಗಡೂರು ಗ್ರಾಮದಲ್ಲಿ ವಾಸವಿದ್ದ ಕಾರಣ ಖಾತೆ ಬದಲಾವಣೆಯಾಗಿರುವುದು ಅವರ ಗಮನಕ್ಕೆ ಬಂದಿತ್ತು ಎಂದರೆ ಸರಿ.

ನನ್ನ ತಾತನ 2ನೇ ಮಗ ಮುದ್ದುಮಾದೇಗೌಡ ಮತ್ತು 1ನೇ ಪ್ರತಿವಾದಿಗೆ 1992-93ರಲ್ಲಿ ತಲಾ 2 ಎಕರೆ 15 ಗುಂಟೆಯಂತೆ ಖಾತೆಯಾಗಿದೆ ಎಂದರೆ ಸುಳ್ಳು. ಆ ರೀತಿ ಖಾತೆಯಾದ ನಂತರ ಅವರಿಬ್ಬರು ಬೇರೆ ಬೇರೆ ಸ್ವಾಧೀನ ಇದ್ದು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ಖಾತೆಯಾದ ವಿಚಾರ ನನ್ನ ತಂದೆಗೆ ಮತ್ತು ಅವರ ತಾಯಿಗೆ ತಿಳಿದಿತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು 11 ರಿಂದ 17ನೇ ಪ್ರತಿವಾದಿಗಳನ್ನು ಕ್ರಯದಾರರು ಎಂದು ಪಕ್ಷಗಾರರನ್ನಾಗಿ ಮಾಡಿದ್ದು ಕ್ರಯ ಪತ್ರವು 2020-21ರಲ್ಲಿ ಆಗಿರುತ್ತದೆ. ಕ್ರಯವಾದ ನಂತರ ಪ್ರತಿವಾದಿ 11 ರಿಂದ 17 ಅಂಗಡಿ ಮಳಿಗೆ ಕಟ್ಟಿ ವ್ಯವಹಾರ ಮಾಡುತ್ತಿದ್ದಾರೆ ಎಂದರೆ ಸರಿ. 11 ರಿಂದ 17ನೇ ಪ್ರತಿವಾದಿಗಳು ಖರೀದಿ ಮಾಡಿ ಅಂಗಡಿ ಮಳಿಗೆ ಕಟ್ಟಿ ವ್ಯವಹಾರ ಮಾಡುವ ವಿಚಾರ ಅದೇ ಊರಿನಲ್ಲ ಇದ್ದ ಕಾರಣ ನಮಗೆ ತಿಳಿಯಿತು ಎಂದರೆ ನಮ್ಮ ತಂದೆ ಮೃತರಾದ ನಂತರ ನಾವು 2017ರಲ್ಲಿ ಮೈಸೂರಿನಲ್ಲಿ ವಾಸವಿದ್ದೆವು ಎನ್ನುತ್ತಾರೆ. ಕ್ರಯವಾದ ವಿಚಾರ ನನಗೆ ಗೊತ್ತಿತ್ತು ಆದರೆ ಕ್ರಯವಾದ ಆಸ್ತಿಯಲ್ಲಿ ನಮಗೆ ಹಕ್ಕು ಇಲ್ಲದಿದ್ದ ಕಾರಣ ಸುಮ್ಮನಿದ್ದೆವು ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಮತ್ತು ಮದ್ದುಮಾದೇಗೌಡನ ವ್ಯವಹಾರಗಳು ಬೇರೆ ಬೇರೆ ಎಂದರೆ ಸರಿಯಲ್ಲ. ಅವರಿಬ್ಬರು ದಾವಾ ಆಸ್ತಿ ವ್ಯವಹಾರ ಮತ್ತು ವಾಸ ಪ್ರತ್ಯೇಕ ವಾಸ ಇದ್ದಾರೆ ಎಂದರೆ ಬೇರೆ ಮನೆಗಳಲ್ಲಿ ವಾಸ ಇದ್ದು ಒಂದೇ ವ್ಯವಹಾರ ಮಾಡುತ್ತಾರೆ ಎನ್ನುತ್ತಾರೆ. 11 ರಿಂದ 17ನೇ ಪ್ರತಿವಾದಿಗಳಿಗೆ ಎರಡೂ ಕುಟುಂಬದವರು ಪ್ರತ್ಯೇಕ ಪ್ರತ್ಯೇಕವಾಗಿ ಮಾರಾಟ ಮಾಡಿದ್ದಾರೆ. ಮುದ್ದುಮಾದೇಗೌಡ ಮತ್ತು 1ನೇ ಪ್ರತಿವಾದಿ ಬಹಳ ವರ್ಷಗಳಿಂದ ಪ್ರತ್ಯೇಕ ವ್ಯವಹಾರ ಮಾಡುತ್ತಿದ್ದು ಪ್ರತ್ಯೇಕ ಬ್ಯಾಂಕ್ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ

6ರಂತೆ 1ನೇ ಪ್ರತಿವಾದಿ 2013-14ರಲ್ಲಿ ತಗಡೂರಿನ ಎಸ್ ಬಿ ಎಂ ಶಾಖಲೆಯಲ್ಲಿ ಸಾಲ ಪಡೆದಿದ್ದಾರೆ ಎಂದರೆ ನಮಗೆ ತಿಳಿಯದೇ ಪಡೆದಿದ್ದಾರೆ ಎನ್ನುತ್ತಾರೆ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.